# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಹೆಚ್ಚುವರಿ ನಿರ್ದೇಶಕರು(ನಗರ ಯೋಜನೆ) ರವರ ಕಛೇರಿ,ಮಹಾನಗರ ಪಾಲಿಕೆ,ಎನ್.ಆರ್. ವೃತ್ತ,ಬೆಂಗಳೂರು-02.**

ಸಂಖ್ಯೆ: ಜೆಡಿಟಿಪಿ (ದ)/ಪ್ರಾ.ಪ/ಸನಿ/49/2016-17 ದಿನಾಂಕ: 27-02-2017.

## ಪ್ರಾರಂಭಿಕ ಪ್ರಮಾಣ ಪತ್ರ

**ವಿಷಯ:** ಆಸ್ತಿ ಸಂಖ್ಯೆ 47/48-4, 9ನೇ ಬ್ಲಾಕ್, ಜಯನಗರ ಉಪವಿಭಾಗ, ಬನ್ನೇರುಘಟ್ಟ ರಸ್ತೆ, ವಾರ್ಡ್ ಸಂಖ್ಯೆ 171, ಬೆಂಗಳೂರು ಇಲ್ಲಿ ನಿರ್ಮಿಸಲಾಗುತ್ತಿರುವ ವಸತಿ ಸಮುಚ್ಚಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಬಗ್ಗೆ.

**ಉಲ್ಲೇಖ:** 1) ನಕ್ಷೆ ಮಂಜೂರಾತಿ ಸಂಖ್ಯೆ: BBMP/Addl.Dir/JD South/ 0181/15-16 ದಿನಾಂಕ: 08-09-2016.
2) ಅರ್ಜಿದಾರರ ಮನವಿ ದಿನಾಂಕ: 27-10-2016.
3) ಅಪರ ನಿರ್ದೇಶಕರು, ನಗರ ಯೋಜನೆ ರವರ ಆದೇಶ ದಿನಾಂಕ: 20-02-2017.

*****

ಜಯನಗರ ಉಪವಿಭಾಗ, ಬನ್ನೇರುಘಟ್ಟ ರಸ್ತೆ, ವಾರ್ಡ್ ಸಂಖ್ಯೆ 171 ರಲ್ಲಿರುವ ಆಸ್ತಿ ಸಂಖ್ಯೆ 47/48-4, 9ನೇ ಬ್ಲಾಕ್ ಇಲ್ಲಿ ನಿರ್ಮಿಸುತ್ತಿರುವ 2ತಳ+ನೆಲ+ಮೇಲಿನ 17 ಅಂತಸ್ತುಗಳ 61 ಘಟಕಗಳುಳ್ಳ ವಸತಿ ಸಮುಚ್ಚಯ ಕಟ್ಟಡಕ್ಕೆ ಈ ಕಛೇರಿಯಿಂದ ಎಲ್.ಪಿ ಸಂಖ್ಯೆ: BBMP/Addl.Dir/JD South/ 0181/15-16 ದಿನಾಂಕ: 08-09-2016 ರಂದು ನಕ್ಷೆ ಮಂಜೂರಾತಿ ನೀಡಲಾಗಿದೆ. ವಸತಿ ಸಮುಚ್ಚಯ ಕಟ್ಟಡದ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಸಲುವಾಗಿ ಕಟ್ಟಡದ ಸ್ಥಳವನ್ನು ದಿನಾಂಕ: 07-01-2017 ರಂದು ಉಪ ನಿರ್ದೇಶಕರು, ಸಹಾಯಕ ನಿರ್ದೇಶಕರು ಮತ್ತು ಸಹಾಯಕ ಅಭಿಯಂತರರವರೊಂದಿಗೆ ಸ್ಥಳ ಪರಿಶೀಲಿಸಿದ್ದು, ವಲಯ ನಿಯಮಾವಳಿಯಂತೆ ಅಗತ್ಯ ನಡುಜಾಗಗಳನ್ನು ಬಿಟ್ಟು ಆರ್.ಸಿ.ಸಿ ಕಂಬಗಳನ್ನು ಅಳವಡಿಸಿರುತ್ತಾರೆ. ಪ್ರಾರಂಭಿಕ ಪ್ರಮಾಣ ಪತ್ರಕ್ಕೆ ಅಗತ್ಯ ಶುಲ್ಕವಾದ ರೂ. 1,68,000/- ಗಳನ್ನು ಅರ್ಜಿದಾರರು ರಸೀದಿ ಸಂಖ್ಯೆ: RE-ifms624-TP/000281 ದಿನಾಂಕ: 23-02-2017 ರಂದು ಭರಿಸಿದ್ದು, ಸಂದಾಯಿಸಿ ಕೊಳ್ಳಲಾಗಿದೆ. ವಸತಿ ಸಮುಚ್ಚಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತಿಗೊಳಪಡಿಸಿ ನೀಡಲಾಗಿದೆ.

1) ಕಟ್ಟಡ ಕಾಮಗಾರಿಯನ್ನು ಮಂಜೂರಾತಿ ನಕ್ಷೆಯಂತೆ ನಿಯಮಾನುಸಾರ ನಿರ್ಮಿಸತಕ್ಕದ್ದು.
2) ಕಟ್ಟಡ ನಿರ್ಮಾಣದ ಪ್ರಗತಿಯನ್ನು ಕಾಲಾನುಸಾರ ಸಂಬಂಧಪಟ್ಟ ಕಛೇರಿಗೆ ಮಾಹಿತಿಯನ್ನು ನೀಡಿ ಮಂಜೂರಾತಿ ನಕ್ಷೆಯಂತೆ ನಿರ್ಮಿಸುತ್ತಿರುವ ಬಗ್ಗೆ ಪರಿವೀಕ್ಷಣೆಗೆ ಒಳಪಡಿಸತಕ್ಕದ್ದು.
3) ಕಟ್ಟಡ ನಿರ್ಮಾಣದ ಸ್ಥಳದಲ್ಲಿ ಅಕ್ಕ-ಪಕ್ಕದವರಿಗೆ ತೊಂದರೆಯಾಗದಂತೆ ಹಾಗೂ ಕೆಲಸಗಾರರಿಗಾಗಿ ಶೆಡ್ ಮತ್ತು ತಾತ್ಕಾಲಿಕ ಶೌಚಾಲಯಗಳನ್ನು ನಿರ್ಮಿಸತಕ್ಕದ್ದು.
4) ಉದ್ಯಾನವನ ಮತ್ತು ಬಯಲುಜಾಗದ ಶುಲ್ಕದ ಬಾಬ್ತು ಮಾನ್ಯ ಸರ್ವೋಚ್ಛ ನ್ಯಾಯಾಲಯದ ಅಂತಿಮ ತೀರ್ಪಿಗೆ ಬದ್ಧರಾಗಿರುವುದಾಗಿ ನೀಡಿರುವ ಮುಚ್ಚಳಿಕೆ ಪತ್ರದಂತೆ ಷರತ್ತನ್ನು ಪಾಲಿಸತಕ್ಕದ್ದು.

27/2/17

ಜಂಟಿ ನಿರ್ದೇಶಕರು, ನಗರ ಯೋಜನೆ (ದಕ್ಷಿಣ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

27/2/17 27/2 27/2

ಗೆ
M/s. B & B Infrastructure Ltd.,
Rep by its Managing Director Sri. Bhaskar Raju
# 47/48-4, 9ನೇ ಬ್ಲಾಕ್, ಜಯನಗರ ಉಪವಿಭಾಗ,
ಬನ್ನೇರುಘಟ್ಟ ರಸ್ತೆ, ವಾರ್ಡ್ ಸಂಖ್ಯೆ 171, ಬೆಂಗಳೂರು.

O/O Joint Director Town Planning (South)